ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 4-9
©*IIMRD*, Mysuru

IIMRD JOURNALS
www.iimrd.com

# ವಸಹಾತುಶಾಹಿ ಕಾಲ ಘಟ್ಟದ ರಾಜಕೀಯ ಕುತಂತ್ರ ನೀತಿ ವಿರುದ್ಧ ದಂಗೆಯೆದ್ದ ಕಿತ್ತೂರುರಾಣಿ ಚೆನ್ನಮ್ಮ

**ಭವಾನಿ ಎಸ್[1] ಮತ್ತು ಡಾ. ನಂದೀಶ ಎಂ. ಎನ್[2]**

[1]ಸಂಶೋಧನಾ ವಿದ್ಯಾರ್ಥಿ, [2]ಮಾರ್ಗದರ್ಶಕರು

ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

**ಸಾರಾಂಶ: (Abstract)**

*ಕನ್ನಡ ನಾಡಿನ ಪರಾಕ್ರಮಿಯೂ, ಪುಣ್ಯದೇವತೆಯೂ, ಭಾರತ ಸ್ವಾತಂತ್ರ್ಯದ ಹರಿಕಾರರ ಪಟ್ಟಿಯಲ್ಲಿ ಸ್ಥಾನ ಹೊಂದಿರುವ ಕಿತ್ತೂರು ರಾಣಿ ಚೆನ್ನಮ್ಮನನ್ನು ಕುರಿತ ನಾಟಕ ಇದಾಗಿದೆ. ಈಕೆಗೆ ಸಂಬಂಧಿಸಿದ ಐತಿಹಾಸಿಕ ಸಂಗತಿಗಳು ಒಂದು ಕಡೆ ಸಂಗ್ರಹವಾಗಿ ದೊರೆಯುವುದಿಲ್ಲ. ಹಾಗೂ ರಾಣಿಯ ಸಮಸ್ತ ಜೀವನ ಗಾಥೆಯನ್ನು ಪ್ರಸ್ತುತಪಡಿಸುವ ಸಮಗ್ರ ಗ್ರಂಥವೊಂದು ರಚನೆಯಾಗಿಲ್ಲ. ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಐತಿಹಾಸಿಕ ಮಂಡಳಿಯವರು ವಸ್ತು ಸಂಗ್ರಹ ಕೈಗೊಂಡಿದ್ದಾರೆ. ಅನೇಕ ಖೈರುಗಳು, ದಪ್ತರುಗಳು, ಪತ್ರಗಳು ಹಾಗೂ ಜನಪದ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ಇತಿಹಾಸ, ವೀರರಾಣಿ ಕಿತ್ತೂರು ಚೆನ್ನಮ್ಮ, ವೃತ್ತಿರಂಗಭೂಮಿ, ವಸಹಾತುಶಾಹಿ*

**ಪೀಠಿಕೆ**

ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಐತಿಹಾಸಿಕ ಮಂಡಳಿಯವರು ಈಗಾಗಲೇ ೧.ಕಿತ್ತೂರು ಬಂಡಾಯ ೧೮೪೬ ೨.ಮಲ್ಲಸರ್ಜಕಾವ್ಯ ೩.ಪರಾಸೀಕಾಗದಪತ್ರಗಳು, ೪.ಕಿತ್ತೂರ ಕಥನಗೀತೆ ಎಂಬ ನಾಲ್ಕು ಹೊತ್ತಿಗೆಗಳನ್ನು ಪ್ರಕಟಿಸಿ ಉಪಕಾರ ಮಾಡಿದ್ದಾರೆ. ಆ ಗ್ರಂಥಗಳಲ್ಲಿ ದೊರೆಯುವ ಅಂಶಗಳೊಂದಿಗೆ ೧. ಬಾಂಬೆ ಕೊರಿಯರ್ (Bombay Courier) ೨.ದಕ್ಷಿಣ ಮಹಾರಾಷ್ಟ್ರ ದೇಶದ ಮಿಲಿಟರಿ ಪತ್ರಗಳು ೩.ಬಾಂಬೆ ಗೆಜೆಟಿಯರ್ (Bomay Gezetteer) ೪.ಇಂಡಿಯನ್ ಆಂಟಿಕ್ವೆರಿ (Indian Antiquery) ೫. ಸ್ಟೋಕ್ಸರ್ ಬೆಳಗಾವಿ ಜಿಲ್ಲೆಯ ಐತಿಹಾಸಿಕ ವರದಿಗಳು (Histirical Accounts of Belagum District Stokes) ೬. ಫ್ಲೀಟರ ಕನ್ನಡ ಲಾವಣಿ ಸಂಗ್ರಹ (Selection of Kanarese Ballads - Fleet Published in Indian Antiquary) ಮೊದಲಾದ ಗ್ರಂಥಗಳಲ್ಲಿ ದೊರೆಯುವ ಐತಿಹಾಸಿಕ ಸಂಗತಿಗಳನ್ನು ಸಂಗ್ರಹಿಸಿದೆ. ಆದರೆ ನಮ್ಮ ದುರ್ದೈವದಿಂದ ರಾಣಿ ಚೆನ್ನಮ್ಮನ ಜೀವನಕ್ಕೆ ಸಂಬಂಧಪಟ್ಟ ಬಹುಮುಖ್ಯ ಸಾಹಿತ್ಯ ಕಾಗದಪತ್ರಗಳು ಬ್ರಿಟಿಷ್ ಮ್ಯೂಸಿಯಂನಲ್ಲಿ ಅಡಗಿವೆ."[೧]

*Please cite this article as:* ಭವಾನಿ, ಎಸ್ ಮತ್ತು ನಂದೀಶ, ಎಂ.ಎನ್. (2025). ವಸಹಾತುಶಾಹಿ ಕಾಲ ಘಟ್ಟದ ರಾಜಕೀಯ ಕುತಂತ್ರ ನೀತಿ ವಿರುದ್ಧ ದಂಗೆಯೆದ್ದ ಕಿತ್ತೂರುರಾಣಿ ಚೆನ್ನಮ್ಮ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 4–9

ಬ್ರಿಟಿಷ್ ಇತಿಹಾಸಕಾರರು ಸಿಪಾಯಿ ದಂಗೆ ಎಂದು ಗುರುತಿಸಲಾದ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಝಾನ್ಸಿರಾಣಿ ಲಕ್ಷ್ಮೀಬಾಯಿಯಂತಹ ವೀರನಾರಿಯನ್ನು ಪರಿಚಯ ಮಾಡಿಕೊಟ್ಟಿತು. 'ಭಾರತ ಬಿಟ್ಟು ತೊಲಗಿ' ಎಂಬ ಆಕೆಯ ರಣಘೋಷ ದುಂದುಂಬಿಯು ಮೊಳಗಿಸಿ, ರಾಜಕೀಯ ಕುಟಿಲ ಮುತ್ಸದ್ದಿಗಳಾದ ಆಂಗ್ಲರೊಂದಿಗೆ ಹೋರಾಡಿ ವೀರ ಮರಣವನ್ನಪ್ಪಿದ ವಾರ್ತೆಯು ಭಾರತದ ನಾರಿಯರಲ್ಲಿ ದೀರ್ಘಾವಧಿಕಾಲ ರೋಮಾಂಚವನ್ನುಂಟುಮಾಡಿ, ಉಜ್ವಲ ದೇಶಭಕ್ತಿಯನ್ನು ಮೂಡಿಸಿತು. ಲಕ್ಷ್ಮೀಬಾಯಿಗೂ ಮೊದಲೇ ಬ್ರಿಟಿಷರ ಕುಟಿಲ ಬುದ್ಧಿಯನ್ನರಿತು ತನ್ನ ತಾಯಿನೆಲದ ಸ್ವಾತಂತ್ರ್ಯದ ರಕ್ಷಣೆಗೆ ರಣಚಂಡಿಯಾದವಳು, ಕನ್ನಡ ನಾಡಿನ ಕಿತ್ತೂರು ರಾಣಿ ಚೆನ್ನಮ್ಮ. ಇದು ೧೮೨೪ ರಲ್ಲಿ ಸಿಪಾಯಿ ದಂಗೆಗೂ ಮೊದಲೇ ೩೩ ವರ್ಷಗಳ ಮುಂಚಿತವಾಗಿಯೇ ನಡೆದಿದೆ. ಇದನ್ನು ಇತಿಹಾಸಕಾರರು ಕಡೆಗಣಿಸುತ್ತಾ ಬಂದಿದ್ದಾರೆ. ಉತ್ತರ ಕರ್ನಾಟಕದಲ್ಲಿ ಚೆನ್ನಮ್ಮ ಹಾಗೂ ರಾಯಣ್ಣನ ಹೆಸರು ಇಂದಿಗೂ ಜನಜನಿತವಾಗಿದೆ. ಕೀರ್ತನಕಾರರು, ವೃತ್ತಿ ನಾಟಕಕಾರರು, ಲಾವಣಿಕಾರರು ಅವರ ಅಮರ ಚರಿತ್ರೆಯನ್ನು ಇಂದಿಗೂ ಹಾಡಿ ಹೊಗಳುವ ಮೂಲಕ ದೇಶಭಕ್ತಿಯನ್ನು ಸಜೀವವಾಗಿ ಉಳಿಸಿಕೊಂಡಿದ್ದಾರೆ.

***"ಚಂಡಿಯೋ ಚೌಡಿಯೋ ಮಾರಿಯೋ ಮಸಣಿಯೋ!***
***ಖಂಡಿತ ಮಾನವಳಿವಳಲ್ಲ!***
***ಗಂಡುಗಳಿಗಳ ಮೀರಿ ರುಂಡವ ತರಿವಳು***
***ಮಹಾಮಾರಿಯಲ್ಲದೆ ಬ್ಯಾರಲ್ಲ!***
***ಚಂಡ ಪ್ರಚಂಡರ ತಂಡವೆ ಕುಂದಿತು ಎಂಬುವ ಶಬ್ದವೇರಣವೆಲ್ಲ.***
***ಪುಂಡರಕ್ಕಸರ ಹಿಂಡು ಮುರಿದ ಚಾಮುಂಡಿಯೇ ಈಕೆಯು ಸುಳ್ಳಲ್ಲ!"*** [೨]

ಎಂದು ಹಾಡುತ್ತಾ ಜನರು ತಮ್ಮ ಭಾಗ್ಯವ ಕಾಪಾಡಿದ ಪೌರುಷದ ತವರಾದ ಕಿತ್ತೂರು ರಾಣಿಯ ಜೀವನದ ವೀರಗಾಥೆಯನ್ನು ಹಾಡಿ ಹೊಗಳಿದ್ದಾರೆ.

ಇಂತಹ ವೀರ ನಾರಿಯರ ಪೌರುಷದ ಕಥೆಯನ್ನು ವೃತ್ತಿರಂಗಭೂಮಿಯು ಪ್ರದರ್ಶಿಸಿ, ಆ ಮೂಲಕ ಜನತೆಯಲ್ಲಿ ದೇಶಭಕ್ತಿಯನ್ನು ಮೂಡಿಸಲು ಪ್ರಾರಂಭಿಸಿತು. ಕನ್ನಡ ವೃತ್ತಿರಂಗ ಭೂಮಿಯ ಇತಿಹಾಸದಲ್ಲಿ ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು ಒಂದು ದೊಡ್ಡ ಮೈಲುಗಲ್ಲಾಗಿದ್ದಾರೆ. ನಾಟಕಕಾರರಾಗಿಯೂ, ನಟರಾಗಿಯೂ ಖ್ಯಾತಿಯನ್ನು ಪಡೆದಿದ್ದರು. ಇವರು ವೀರರಾಣಿ ಕಿತ್ತೂರು ಚೆನ್ನಮ್ಮ, ರಾಣಿ ರುದ್ರಮ್ಮ, ಅಸ್ಪೃಶ್ಯತಾ ನಿವಾರಣೆ, ರಾಷ್ಟ್ರಧ್ವಜ ಮುಂತಾದ ಶ್ರೇಷ್ಠ ನಾಟಕಗಳನ್ನು ರಚಿಸಿದ್ದಾರೆ. ಪೌರಾಣಿಕ ನಾಟಕಗಳನ್ನೇ ಬರೆಯುವ ಸಂಪ್ರದಾಯವು ರೂಢಿಯಾಗಿದ್ದ ಸಮಯದಲ್ಲಿ, ಅದರಿಂದ ಹೊರಬಂದು ದೇಶಭಕ್ತರ ಜೀವನ ಗಾಥೆಯನ್ನು ಕಥಾವಸ್ತುವನ್ನೊಳಗೊಂಡ ನಾಟಕಗಳನ್ನು ರಚಿಸಲು ಮುಂದಾದರು. ಸಂಪ್ರದಾಯಕ್ಕೆ ಜೋತು ಬಿದ್ದು ಅದರಿಂದ ಹೊರಬರಲಾಗದೆ ಒದ್ದಾಡುತ್ತಿದ್ದ ಕ್ಲಿಷ್ಟ ವೇಳೆಯಲ್ಲಿ ಐತಿಹಾಸಿಕ ವಿಚಾರಗಳನ್ನು ಆಯ್ದುಕೊಂಡು ಐತಿಹಾಸಿಕ ನಾಟಕ ರಚಿಸುವುದರೊಂದಿಗೆ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು. ಆದ್ದರಿಂದ ಇವರನ್ನು "ರಂಗದ ಮೇಲೆ ಪ್ರಯೋಗಿಸುವ ಪ್ರಥಮ ಐತಿಹಾಸಿಕ ನಾಟಕ ಬರೆದ ನಾಟಕಕಾರ ಕವಿ"[೩] ಎಂದು ಕರೆದಿದ್ದಾರೆ.

ಕನ್ನಡ ವೃತ್ತಿರಂಗಭೂಮಿಯಲ್ಲಿ ಮೊದಲ ಬಾರಿಗೆ ಐತಿಹಾಸಿಕ ಪ್ರಾಯೋಗಿಕ ನಾಟಕವಾದ 'ವೀರರಾಣಿ ಕಿತ್ತೂರು ಚೆನ್ನಮ್ಮ' ಕಿತ್ತೂರಿನ ದೇಶಭಕ್ತಿಯ ಇತಿಹಾಸಕ್ಕೆ ಹಿಡಿದ ದರ್ಪಣವಾಗಿದೆ. ಬ್ರಿಟಿಷ್ ವೈಸ್‌ರಾಯ್ ಲಾರ್ಡ್‌ಡಾಲ್‌ಹೌಸಿಯು ಜಾರಿಗೆ ತಂದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ಕಾಯ್ದೆಯಿಂದ ಅನೇಕ ಭಾರತೀಯ ಅರಸರು, ಅವರ ಕೈ ಕೆಳಗಿದ್ದ ಸಂಸ್ಥಾನಿಕರು ಈ ಕಾಯ್ದೆಯ ಸುಳಿಗೆ ಸಿಲುಕಿ ನಲುಗಿದರು.

ಅನೇಕ ಸಣ್ಣಪುಟ್ಟ ಸಂಸ್ಥಾನಗಳು ದತ್ತಕ ಮಕ್ಕಳನ್ನು ಪಡೆದುಕೊಂಡು ರಾಜ್ಯಭಾರವನ್ನು ನಡೆಸುತ್ತಿದ್ದರು. ಆಂಗ್ಲರ ಈ ಕಾಯ್ದೆಯಿಂದ ಅನೇಕರು ತಮ್ಮ ಆಳ್ವಿಕೆ ಹಕ್ಕನ್ನು ಕಳೆದುಕೊಳ್ಳಬೇಕಾಯಿತು. ಈ ಅನ್ಯಾಯದ ಕಾನೂನಿನ ವಿರುದ್ಧ ತಮ್ಮೊಳಗೆಯೇ ಕುದಿಯಲಾರಂಭಿಸಿದರು. ಆದರೆ ಯಾರೂ ಬಹಿರಂಗವಾಗಿ ವಿರೋಧಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಆದರೆ ಪ್ರಥಮ ಬಾರಿಗೆ ಈ ಕಾಯ್ದೆಯ ವಿರುದ್ಧ ಸಮರ ಸಾರಿದ ಮನೆತನವೆಂದರೆ ಕಿತ್ತೂರು ಸಂಸ್ಥಾನ. ಈ ಸಂಸ್ಥಾನದ ವೀರಾಗ್ರಣಿಯಾದ ಚೆನ್ನಮ್ಮನು, ಅಜಾನುಬಾಹು ಬ್ರಿಟಿಷರ ಚಕ್ರಾಧಿಪತ್ಯದ ವಿರುದ್ಧ ಸಾರ್ವಜನಿಕವಾಗಿ ಬಂಡಾಯವೇಳುವುದು ಸುಲಭ ಮಾತಾಗಿರಲಿಲ್ಲ. ಆದರೆ ಕಿತ್ತೂರು ಹಾಗೂ ಅಲ್ಲಿನ ರಾಣಿಯು ಧೈರ್ಯ, ಸಾಹಸ, ಶೌರ್ಯ, ಪರಾಕ್ರಮ ಸ್ವಾಭಿಮಾನಗಳಿಗೆ ಹೆಸರಾಗಿದ್ದಿತು. ಬ್ರಿಟಿಷರ ಶೋಷಣೆ, ಕುತಂತ್ರ, ದಬ್ಬಾಳಿಕೆಗಳು ಆಳುವವರನ್ನು ಕೆರಳಿಸಿದ್ದವು. ರಾಣಿ ಚೆನ್ನಮ್ಮನ ಮೂಲಕ ಮಹಿಳೆಯರು ಅಬಲೆಯಲ್ಲ, ಸಬಲೆ ಎಂಬುದನ್ನು ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು ನಾಟಕದ ಮೂಲಕ ತೋರಿಸಿಕೊಟ್ಟಿದ್ದಾರೆ.

ಪ್ರಸ್ತುತ ವೀರ ರಾಣಿ ಕಿತ್ತೂರು ಚೆನ್ನಮ್ಮನ ನಾಟಕವು ಶಿವಲಿಂಗ ರುದ್ರಸರ್ಜಾ (ಉರ್ಫ್ ಬಾಬಾ ಸಾಹೇಬ್)ನು ಮಕ್ಕಳಿಲ್ಲದೆ ಪರಿತಪಿಸಿ ಚಿಂತೆಯಿಂದ ಚಿತೆಯಲ್ಲಿ ಬೆಂದು ಮಸಣದ ಹಾದಿಯನ್ನು ಕ್ರಮಿಸುವ ವಿಕೃತ ಗಳಿಗೆಯಲ್ಲಿ, ಸಾಧ್ಯವಾದಷ್ಟು ಬೇಗನೆ ಆಂಗ್ಲರಿಗೆ ತಿಳಿಯದಂತೆ ದತ್ತಕ ಪುತ್ರನನ್ನು ತೆಗೆದುಕೊಂಡು ಉತ್ತರಾಧಿಕಾರಿಯನ್ನಾಗಿ ಮಾಡುವ ಅಂತಿಮಗಳಿಗೆ, ಈ ಸಮಾಚಾರ ಕೆಲವು ದೇಶದ್ರೋಹಿಗಳ ಸ್ವಾರ್ಥಪರತೆಯಿಂದ ಬ್ರಿಟಿಷ್ ಅಧಿಕಾರಿಗೆ ತಲುಪುವುದರೊಂದಿಗೆ ಆರಂಭವಾಗುತ್ತದೆ. ನಾಟಕದ ಪ್ರಮುಖ ನಾಯಕಿ ರಾಣಿ ಚೆನ್ನಮ್ಮ. ಮಿಕ್ಕುಳಿದವುಗಳು ಅವಳಿಗೆ ಪೋಷಕ ಪಾತ್ರಗಳಾಗಿ ಬರುವ ಪಾತ್ರವಾಗಿವೆ. ಈ ನಾಟಕವು ಕಿತ್ತೂರು ನಾಡಿನ ಸ್ವಾಭಿಮಾನಕ್ಕೆ ಹಿಡಿದ ಕನ್ನಡಿ ಯಾಗಿದೆ.

ಮಲ್ಲಪ್ಪಶೆಟ್ಟಿಯಂತಹ ಸ್ವಾರ್ಥ ವ್ಯಕ್ತಿಯ ದೇಶದ್ರೋಹಿಯ ಅಂತರಂಗವನ್ನರಿತ ಚೆನ್ನಮ್ಮರು, ನುರಿತ ರಾಜಕಾರಣಿಯಾಗಿದ್ದು, ತನ್ನ ಆಪ್ತ ಬಳಗದ ರುದ್ರಪ್ಪನಾಯಕನೆಂಬ ನಂಬಿಕಸ್ತನಿಗೆ ನಾಡಿನ ಒಳಗೆ ನಡೆಯುವ ಪಿತೂರಿಯ ಬಗ್ಗೆ ತಿಳಿಯಲು ಆಜ್ಞಾಪಿಸುವಳು. ಆತನು ವೇಷ ಮರೆಸಿಕೊಂಡು ವಿಷಯ ಸಂಗ್ರಹಿಸುವ ವಿಷಯ ತಿಳಿದ ಮಲ್ಲಪ್ಪ ಶೆಟ್ಟಿಯು ಥ್ಯಾಕರೆಗೆ ಸುದ್ದಿ ಮುಟ್ಟಿಸುವನು. ಬ್ರಿಟಿಷರಿಗೆ ಇಂತಹ ವ್ಯಕ್ತಿಗಳ ಅವಶ್ಯಕತೆ ಇತ್ತು. ನಮ್ಮವರಿಂದಲೇ ನಮ್ಮನ್ನು ಒಡೆಯುವ ನೀತಿಯು ಅವರಿಗೆ ಕರತಲಾಮಲಕವಾಗಿತ್ತು. ಆಂಗ್ಲರು ಮೋಸದಿಂದ ರುದ್ರನಾಯಕನನ್ನು ಬಂದಿಸಿ ಫಿರಂಗಿಯ ಬಾಯಿಗೆ ಕಟ್ಟುವರು. ಆ ಸಮಯದಲ್ಲಿ ಆತನಾಡುವ ಮಾತು "ದೇಶವನ್ನು ಹಾಳು ಮಾಡುವಂತಹ ಕುಲಹೀನ ಮಾತ್ರ ನಾನಲ್ಲ"[೪] ಎಂಬ ಮಾತು ದೇಶಭಕ್ತಿ ಮೂಡಿಸುತ್ತದೆ

ಬ್ರಿಟಿಷರು ದತ್ತಕ ವಿಧಾನವನ್ನು ಅಸಿಂಧುವೆಂದು ಘೋಷಿಸಿ ಕಿತ್ತೂರಿಗೆ ತಮ್ಮ ವಕೀಲನನ್ನು ಕಳುಹಿಸಿಕೊಡುತ್ತಾರೆ. ಕೋಪಿತಳಾದ ಚೆನ್ನಮ್ಮ ಆತನನ್ನು ಬಂಧಿಸಿ ಶಿಕ್ಷೆಗೆ ಗುರಿ ಮಾಡಬಹುದಾಗಿತ್ತು, ಆದರೆ ಆಕೆ ಬಂಧಿಸದೆ ಮಾನವೀಯತೆ ಮತ್ತು ರಾಜಕೀಯ ಮುತ್ಸದ್ಧಿತಣವನ್ನು ಮೆರೆಯುತ್ತಾಳೆ. ಬ್ರಿಟಿಷರೊಂದಿಗೆ ವೀರಾವೇಶದಿಂದ ಯುದ್ಧವನ್ನು ಕೈಗೊಂಡು ಹೋರಾಡಿ ವಿಜಯಯನ್ನು ಗಳಿಸುತ್ತಾಳೆ. ಆ ಸಮಯದಲ್ಲಿ ಮಲ್ಲಪ್ಪ ಶೆಟ್ಟಿಯು ಸೆರೆಯಾಗುವನು. ಆ ಸಮಯದಲ್ಲಿ ಆತನಿಗೆ ಗಲ್ಲು ಶಿಕ್ಷೆಯನ್ನು ನೀಡದೆ ದರ್ಬಾರಿನಲ್ಲಿ ವಿಚಾರಣೆ ನಡೆಸಿ ಶಿಕ್ಷೆಯನ್ನು ವಿಧಿಸುವುದು, ಒಬ್ಬ ರಾಜ ಕೈದಿಯಾದರೂ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕೆಂಬ ವಿವೇಚನೆಯಿಂದ ವಿಚಲಿತಳಾಗುವುದಿಲ್ಲ. ಶತ್ರುವಾದ ಥ್ಯಾಕರೆಯ ಮಕ್ಕಳನ್ನು ಬಂಧಿಸಿದರೂ ಸಹ ಶಿಕ್ಷಿಸದೆ, ಮಾತೃ ವಾತ್ಸಲ್ಯವನ್ನು ತೋರಿ ಮಕ್ಕಳಿಗೆ ಕುಂದುಕೊರತೆಯಿಲ್ಲದೆ ನೋಡಿಕೊಳ್ಳುವಂತೆ ಕಟ್ಟಪ್ಪನೆ ನೀಡುವಳು.

ಥ್ಯಾಕರೆಯ ಸಾವಿನಿಂದ ಕ್ರೋಧಗೊಂಡ ಆಂಗ್ಲರು ಕಿತ್ತೂರಿನ ಮೇಲೆ ದಾಳಿ ಮಾಡುವ ಸೂಚನೆಯು ದೊರೆತಾಗ ಆಕೆಯ ದರ್ಬಾರನ್ನು ಕರೆದು "ನಮ್ಮ ನಾಡಿನ ವೀರರೇ; ನಿಜವಾದ ಕನ್ನಡ ರಕ್ತವು ನಿಮ್ಮಲ್ಲಿದ್ದರೆ ನಮ್ಮ ಕನ್ನಡ ದೇಶವನ್ನು ಪರವಶ ಮಾಡಲಿಕ್ಕಿಲ್ಲವೆಂಬುದು ನನ್ನ ನಂಬಿಕೆ"[೫] ಇಲ್ಲಿ ನಮ್ಮ ಕನ್ನಡ ವೀರರೆಂದು ಮುಂತಾದ ತಾಯಿನೆಲದ ಬಗೆಗಿನ ಅಭಿಮಾನದ ನುಡಿಗಳು ಕನ್ನಡಿಗರಲ್ಲಿ ದೇಶಾಭಿಮಾನವನ್ನು ಕೆರಳಿಸುತ್ತಿತ್ತು. ತನ್ಮೂಲಕ ಸ್ವಾತಂತ್ರ್ಯ, ಜಾಗೃತಿ, ಸ್ವಾತಂತ್ರ್ಯ ಪ್ರಜ್ಞೆ, ಪ್ರತಿಯೊಬ್ಬರಲ್ಲೂ ಮೂಡಿ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡುತ್ತಿತ್ತು.

ಯುದ್ಧ ಜರುಗಿ ವೀರರೆಲ್ಲ ಮಡಿದ ನಂತರ ಚೆನ್ನಮ್ಮನನ್ನು ಸೆರೆ ಹಿಡಿಯಲಾಗುತ್ತದೆ. ಆ ಸಮಯದಲ್ಲಿ ಚೆನ್ನಮ್ಮನಿಗೆ ಕ್ರೂರವಾದ ಶಿಕ್ಷೆಯನ್ನು ವಿಧಿಸಬೇಕು ಎಂದು ನಿರ್ಧಾರವಾಗುವಾಗ ಥ್ಯಾಕರೆಯ ಮಕ್ಕಳು 'ಚೆನ್ನಮ್ಮನು ನಮ್ಮ ಮಾನ ಮರ್ಯಾದೆಯನ್ನು ಕಾಪಾಡುವುದರೊಂದಿಗೆ ಪ್ರಾಣಭಿಕ್ಷೆ ನೀಡಿದ್ದಾಳೆ, ಅತಿ ಪ್ರೀತಿಯಿಂದ ನಮ್ಮನ್ನು ನಡೆಸಿಕೊಂಡಿದ್ದಾಳೆ' ಎಂದು ಹೇಳಲು ಕಮಿಷನರ್ ತಬ್ಬಿಬ್ಬಾಗುವನು. ಚೆನ್ನಮ್ಮನ ಮಾನವೀಯತೆಗೆ ಇದೊಂದು ಕೈಗನ್ನಡಿಯಂತಿದೆ. ನಂತರ ತಮ್ಮ ಅಧಿಕಾರಿಗಳನ್ನು ಬಿಡಿಸಿಕೊಂಡು ಶಾಂತಿಯಿಂದ ಮಾತನಾಡುತ್ತಲೇ ಕರ್ಜನ್ ಡಿಕೆನ್‌ನ ನೇತೃತ್ವದಲ್ಲಿ ಬಹುದೊಡ್ಡ ಸೈನ್ಯವನ್ನು ಕಿತ್ತೂರಿನ ಮೇಲೆ ದಾಳಿ ಮಾಡಲು ಕಳುಹಿಸುತ್ತಾರೆ. ಇದರಿಂದಲೇ ತಿಳಿಯುತ್ತದೆ ಅವರು ನಂಬಿಕೆಗೆ ಅರ್ಹರಲ್ಲವೆಂಬುದು. ಆಕೆಯನ್ನು ಯುದ್ಧ ಕೈದಿಯಾಗಿ ಬಂಧಿಸಿದರೂ; ಆ ರೀತಿ ನಡೆಸಿಕೊಳ್ಳದೆ ಗೌರವಯುತವಾಗಿ ಬೈಲಹೊಂಗಲ ಜೈಲಿನೆಡೆಗೆ ಕರೆದೊಯ್ಯುವಾಗ ಆಕೆಯು "ಬಂದುಗಳೇ ನಿಮ್ಮ ತಾಯಿಯ ಹೋರಾಟದ ವಿರಾಟ ಸ್ವರೂಪವನ್ನು ಕಂಡು ಸುಮ್ಮನೆ ಕೈ ಕಟ್ಟಿಕೊಂಡು ಕೂರಬೇಡಿರಿ, ನಿಜವಾಗಿಯೂ ನೀವು ಸಿಂಹದ ಶಿಶುಗಳು ಜಂಬುಕದ ಮರಿಗಳಲ್ಲ"[೬] ಈ ವಾಣಿಯ ಮುಂದಿನ ಸ್ವಾತಂತ್ರ್ಯವೀರರಿಗೆ ಚೈತನ್ಯ, ಸ್ಪೂರ್ತಿಯನ್ನು ನೀಡಿ ಕೊನೆ ಉಸಿರಿರುವವರೆಗೂ ಹೋರಾಟ ಮಾಡಲು ಅನುವು ಮಾಡಿಕೊಟ್ಟಿತು. ಮರಳಿ ಕಿತ್ತೂರು ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಹಲವರು ಬ್ರಿಟಿಷರ ವಿರುದ್ಧ ದಂಗೆ ಎದ್ದರು.

ಕಿತ್ತೂರ ಚೆನ್ನಮ್ಮನ ಹೋರಾಟ ಚಿಕ್ಕದಾದರೂ ಅದರಿಂದ ಉಂಟಾದ ಪರಿಣಾಮ ಚಿಕ್ಕದಲ್ಲ. ದೇಶಭಕ್ತಿಯನ್ನು ರಣಹೇಡಿಗಳಲ್ಲಿ ಉತ್ಸಾಹವನ್ನು, ವಾತ್ಸಲ್ಯ ಹೀನರಿಗೆ ಪ್ರೀತಿಯ ಮಹತ್ವವನ್ನು, ರಾಕ್ಷಸ ಬುದ್ಧಿಯವರಿಗೆ ಮಾನವೀಯತೆಯನ್ನು ಇವೆಲ್ಲದಕ್ಕಿಂತ ಮುಖ್ಯವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮವೆಂಬ ದೀವಿಗೆಗೆ ಬೆಂಕಿಯನ್ನು ಹಚ್ಚಿದಂತಾಯಿತು. ಹಾಗೆಯೇ ಚಿಕ್ಕೋಡಿ ಶಿವಲಿಂಗಶಾಸ್ತ್ರೀಗಳಿಂದ ವಿರಚಿತವಾದ ಈ ನಾಟಕ ರಂಗಭೂಮಿಯನ್ನು ದೀರ್ಘಕಾಲದವರೆಗೆ ಆಳಿತು.

ಕ್ರಾಂತಿಕಾರಿಯಾಗಿದ್ದ ಶಾಸ್ತ್ರೀಗಳು ಆರು ತಿಂಗಳ ಕಾಲ ಕಿತ್ತೂರಿನಲ್ಲಿ, ಕಿತ್ತೂರಿನ ಇತಿಹಾಸವನ್ನು ಶೋಧಿಸಿ, ಸಂಗ್ರಹಿಸಿ ಕಿತ್ತೂರು ರಾಣಿ ಚೆನ್ನಮ್ಮ ನಾಟಕ ಬರೆದರು. ಈ ನಾಟಕವನ್ನು ಪ್ರದರ್ಶಿಸಲು ಹಲವಾರು ಕಂಪನಿ ಮಾಲೀಕರು ತುದಿಗಾಲಲ್ಲಿ ನಿಂತಿದ್ದರು. ಇವರಲ್ಲಿ ನಾವಿನ್ಯತೆ ಇರುತ್ತಿತ್ತು. “ಅನೇಕರು ಶಾಸ್ತ್ರೀಗಳ ನಾಟಕಗಳನ್ನು ನೋಡುವುದಕ್ಕಿಂತ ಮೊದಲೇ ಕೃತಿಗಳನ್ನು ಕೊಂಡು ಓದಿ ನಂತರ ನಾಟಕ ನೋಡಲು ಹೋಗುತ್ತಿದ್ದರು.”[೭] ೧೯೨೯ರಲ್ಲಿ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿಯ ಬಸವನಗೌಡ ಬಂಧುಗಳು ಅಂದಿನ ಕಾಲದಲ್ಲಿಯೇ ೩೦೦೦ ರೂಪಾಯಿಗಳಷ್ಟು ಬೃಹತ್ ಮೊತ್ತವನ್ನು ಶಾಸ್ತ್ರೀಗಳಿಗೆ ಗೌರವ ಧನವಾಗಿ ಕೊಟ್ಟು, ನಾಟಕದ ಹಕ್ಕನ್ನು ಪಡೆದರು. ಇದರಿಂದಲೇ ಈ ನಾಟಕದ ಮಹತ್ವ ತಿಳಿಯುತ್ತದೆ. “ಅಂದಿನ ದಿನಗಳಲ್ಲಿ ಓರ್ವ ಕವಿ (ನಾಟಕಕಾರ) ೩೦೦೦ ರಾಯಲ್ಟಿ ಪಡೆದದ್ದು ದಾಖಲಾತ್ಮಕವೆನಿಸುತ್ತದೆ”[೮] (ಮರೆಯಲಾಗದ ನಾಟಕಕಾರ ಚಿಕ್ಕೊಡಿ ಶಿವಲಿಂಗಶಾಸ್ತ್ರೀಗಳು – ಬಿ.ಎಸ್ ಗವಿಮಠ, ಪುಟ ೨೬ )

ಪ್ರಗತಿಪರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಿದ್ದ ಶಾಸ್ತ್ರೀಗಳು ರಂಗಭೂಮಿಯ ಮೂಲಕ ಸ್ವಾತಂತ್ರ್ಯದ ಹುಚ್ಚಿಗೆ ಕಿಚ್ಚು ಹೊತ್ತಿಸಿದರು. ಇದು ರಂಗಭೂಮಿಗೆ ಸೀಮಿತವಾಗಿರದೆ ದೇಶಾದ್ಯಂತ ಪರೋಕ್ಷವಾಗಿ ಸ್ವಾತಂತ್ರ್ಯದ ಆಂದೋಲನಕ್ಕೆ ಕರೆಯನ್ನು ನೀಡಿತು. ಅನೇಕ ಮಂದಿಯು ಮನೆ– ಮಠ ತೊರೆದು ಗಾಂಧೀಜಿಯವರು ಕೈಗೊಂಡ ಅಸಹಕಾರ ಚಳುವಳಿಯಲ್ಲಿ ಸ್ವಯಂ ಆಸಕ್ತಿಯಿಂದ ಭಾಗವಹಿಸಿದರು. ವಿದೇಶಿ ವಸ್ತುಗಳನ್ನು ವಸ್ತ್ರಗಳನ್ನು ಸುಟ್ಟು ಹಾಕಿದರು. ಸೇಂಧಿ ಗಿಡಗಳನ್ನು ಕಡಿದು ಚೆಲ್ಲಾಡಿದರು. ಖಾದಿ ಬಟ್ಟೆಯನ್ನು ಧರಿಸತೊಡಗಿದರು. ಸ್ತ್ರೀಯರು ಬ್ರಿಟಿಷ್ ಅಧಿಕಾರಿಗಳಿಗೆ ಚಪ್ಪಲಿಯನ್ನು ತೋರಿಸಿದರು. ಇದೆಲ್ಲದಕ್ಕೂ ಕಾರಣ ಕಿತ್ತೂರು ಚೆನ್ನಮ್ಮ ನಾಟಕ ಪರೋಕ್ಷವಾಗಿ ಸ್ವಾತಂತ್ರ್ಯ ಚಳುವಳಿಗೆ ಕೊಟ್ಟ ಕೊಡುಗೆ ಎಂಬುವುದರಲ್ಲಿ ಅನ್ಯ ಮಾತಿಲ್ಲ.

**ಕೊನೆ ಟಿಪ್ಪಣಿ**

೧. ಅ.ನ.ಕೃ. (೧೯೫೧). ಕಿತ್ತೂರು ರಾಣಿ ಚೆನ್ನಮ್ಮ – ರೇಡಿಯೋ ನಾಟಕ. ಪುಟ. ಮುನ್ನುಡಿ
೨. ಅದೇ, ಪುಟ ೧
೩. ಅಂಬಲಿ, ಎನ್. ಎಂ. (೨೦೦೭). ನಾಟಕಕಾರ ಚಿಕ್ಕೋಡಿ ಶಿವಲಿಂಗ ಶಾಸ್ತ್ರೀಗಳು. ಪುಟ.೨೧೪,
೪. ಅದೇ, ಪುಟ ೨೧೭
೫. ಅದೇ, ಪುಟ ೧೧೨
೬. ಅದೇ, ಪುಟ ೧೧೨

೭. ಗವಿಮಠ, ಬಿ. ಎಸ್. (೧೯೫೫). ಮರೆಯಲಾಗದ ನಾಟಕಕಾರ ಚಿಕ್ಕೋಡಿ ಶಿವಲಿಂಗ ಶಾಸ್ತ್ರೀಗಳು. ಪುಟ. ೨೬

೮. ಅದೇ, ಪುಟ.೨೭

**ಪರಾಮರ್ಶನ ಗ್ರಂಥಗಳು**


- ಅ.ನ.ಕೃ. (೧೯೫೧). *ಕಿತ್ತೂರು ರಾಣಿ ಚೆನ್ನಮ್ಮ.* ಆನಂದ್ ಬ್ರದರ್ಸ್ ಪಬ್ಲಿಷರ್ಸ.
- ಅಂಬಲಿ, ಎನ್. ಎಂ. (೨೦೦೭). *ನಾಟಕಕಾರ ಚಿಕ್ಕೋಡಿ ಶಿವಲಿಂಗ ಶಾಸ್ತ್ರೀಗಳು.* ಕನ್ನಡದಲ್ಲಿ ಪಿಹೆಚ್.ಡಿ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ.
- ಚಂದ್ರಶೇಖರ ಹೆಚ್. *ಬ್ರಿಟಿಷರ ವಿರುದ್ಧ ಸಿಡಿದೆದ್ದ ವೀರರಾಣಿ ಚೆನ್ನಮ್ಮ*
- ಗವಿಮಠ, ಬಿ. ಎಸ್. (೧೯೫೫). *ಮರೆಯಲಾಗದ ನಾಟಕಕಾರ ಚಿಕ್ಕೋಡಿ ಶಿವಲಿಂಗ ಶಾಸ್ತ್ರೀಗಳು.* ಶಿವಬಸವ ಪ್ರಕಾಶನ.
- ಹಾಲಪ್ಪ, ಗ. (೧೯೬೮). *ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ.* ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್.